ಮೈಸೂರ ಗೆಜೆಟ್.

ನಂ. 13 ಸರ್ಕಾರದಿಂದ ಫಾಯಿಷ್ ಆದ್ದು. ಸ್ 1890.

ಬೆಂಗಳೂರು, ಶನಿವಾರ, ಏಪ್ರಿಲ್ ತಾ/ 5, ಸ್ 1890.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾವೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟು ಇನ್‌ಸ್ಪೆಕ್ಟರ್ ಜನರಲ್‌ಯವರು, ರಿಜಿಸ್ಟ್ರೇರ್ಷ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜ್‌ರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೊಲೀಸ್ ಸೂಪರ್ಟೆಂಡೆಂಟರು, ಫಾರೆಸ್ಟು ಆಫಿಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತೀ ರಿಪೋರ್ಟುಗಳು; ಪ್ರೋಸ್ಪ್ಯಾಕ್ಟಸ್ ನೋಟಿಸ್‌ಗಳು.

3ನೇ ಭಾಗ–ಶ್ರೀವರ್ಮ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟ್ಸುಗಳು ವ ರೆಗ್ಯುಲೇರ್ಷಗಳು—ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀವರ್ಮಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾವೆಗಳು.

ಜನರಲ್

ಇಸ್ತಿಹಾರ್‌ನಾವೆ.

ತಾರೀಖು 1ನೇ ಮಾರ್ಚಿ 1890.

ನಂ. 359.—ಸ್ 1881ನೇ ಇಸವಿಯ XXIIನೇ ನಂಬರುಳ್ಳ ಎಕ್ಸೈಜ್ ಆಕ್ಟಿನ 55ನೇ ಸೆಕ್ಷನಿನ G ಕಾ ಜ್ ನಲ್ಲಿ ವಿಧಿಸೋಣಾದ ನಿಬಂಧನೆಗಳನ್ನನುಸರಿಸಿ ಇದರಡಿ ನಮೂದಾಗುವ ನಿಯಮವು "ಚಿಲ್ಲರೆ ಸಾರಾಯಿ ಬಿಕರಿಯ ಲೈಸೆನಿನಲ್ಲಿ" 9 (a)ನೆ ನಿಬಂಧನೆಯಾಗಿ ಸೇರಿಸಲ್ಪಡತಕ್ಕದ್ದೆಂದು ಶ್ರೀಮನ್ಮಹಾರಾಜಾ ಸರ್ಕಾರದವರು ಇದರಿಂದ ಅಪ್ಪಣೆ ಕೊಡಿಸಿರುತ್ತಾರೆ.

9 (a)—ಪರಾಬ್ ಬಿಕರಿಯಾಗುವ ದುಕಾನಿನಲ್ಲಾಗಲಿ ಯಾ ಲೈಸೆನ್ಸುದಾರ ಯಾ ಬಿಕರೀದಾರನ ಬಳಿಯಲ್ಲಾಗಲಿ ಯಾ ಅವನ ಸ್ವಾಧೀನದಲ್ಲಾಗಲಿ, ಯಾ ಅಂಥಾವನ ದುಕಾನಿನ ನವಕರರ ಬಳಿಯಲ್ಲಾಗಲಿ ಅಥವಾ ಅವರ ಸ್ವಾಧೀನದಲ್ಲಾಗಲಿ, ಪರಾಬ್ ವಿನಾ ಇತರ ಯಾವ ನೀರೇ ಆಗಲಿ ಯಾ ಸಾರಾಯಿ ಯಿಪ್ಪು ಮಟ್ಟಿಗೂ ಇರತಕ್ಕದ್ದಲ್ಲವು.

ತಾರೀಖು 19ನೇ ಮಾರ್ಚಿ 1890.

ಕ್ಯಾಂಪ್ ನಂ. 1022.—(1888ನೇ ಇಸವಿಯ 4ನೇ ರೆಗ್ಯುಲೇರ್ಷ ಯಂಬ) ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನ 236ನೇ ಸೆಕ್ಷನಿನ 2ನೇ ಕಲಮನುಸರಿಸಿ ಸರಕಾರದ ವಿಚಾರಣೆಯೊಳಗೆ ಬಂದಿರುವ ದೇವನಹಳ್ಳಿ ತಾಲ್ಲೂಕು ಪೈಕಿ ಜೋಡಿ ಮಲಿನೆ ನಹಳ್ಳಿ ಗ್ರಾಮಕ್ಕೆ ಸದರೀ ಕೋಡಿನ 8 ವ 9ನೇ ಚಾಪ್ಟರುಗಳ ನಿಬಂಧನೆಗಳು ಲಗಾವಾಗಿರತಕ್ಕದ್ದೆಂದು ಮೈಸೂರು ಕೇಮೆಯ ಶ್ರೀಮನ್ಮಹಾರಾಜಾ ಸರ್ಕಾರದವರು ಅಪ್ಪಣೆ ಕೊಡಿಸಿರುತ್ತಾರೆ.

ತಾರೀಖು 28ನೇ ಫಿಬ್ರವರಿ 1890.

ನಂ. 362.—ಇದರಿಂದ ತಿಳಿಯಪಡಿಸುವದೇನಂದರೆ, ಶಿವಮೊಗ್ಗಾ ಡಿಸ್ಟ್ರಿಕ್ಟಿನ ಡಿಪೋದಲ್ಲಿ ನಾಟಾ ವ ಬಿದರುಗಳ ಪುರೋಕ್ತು ಬಗ್ಗೆ ಇದರಿಂದ ನಮೂದಾಗುವ ದರಗಳು ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್‌ಯವರು ಯಾವ ತಾರೀಖು ಲಾಗಾಯತು ಚಾಲತಿಗೆ ತರುತ್ತಾರೋ ಅದು ನೋಡಲು ಜಾರೀಗೆ ಬರತಕ್ಕದ್ದು.

ನಾಟಾ ವಗೈರೆಗಳ ತಪಸೀಲ್.	ಕ್ಲಾಸ್.	ಸಲೆಅಡಿ 1ಕ್ಕೆ ದರ ರೂ.	ಆ.	ಪೈ.
ತ್ಯಾಗದ ದಿಮ್ಮಿಗಳು	1ನೇ ಕ್ಲಾಸ್	1	8	0
ಡಿಟೋ	2ನೇ ಡಿಟೋ	1	4	0
ಡಿಟೋ	3ನೇ ಡಿಟೋ	1	0	0
ಡಿಟೋ	4ನೇ ಡಿಟೋ	0	12	0
ಮನ್ನಾ ಜಾತಿ ದಿಮ್ಮಿಗಳು	1ನೇ ಡಿಟೋ	0	13	0
ಡಿಟೋ	2ನೇ ಡಿಟೋ	0	10	0
ಡಿಟೋ	3ನೇ ಡಿಟೋ	0	8	0
ಉಳಿಸಿಕೊಳ್ಳಲ್ಪಡದೇ ಇರುವಂಥಾದ್ದು	1ನೇ ಡಿಟೋ	0	8	0
ಡಿಟೋ	2ನೇ ಡಿಟೋ	0	6	0
ಡಿಟೋ	3ನೇ ಡಿಟೋ	0	4	0
ತ್ಯಾಗದ ಕೂಚಗಳು 4 ಸಲೆಅಡಿಗಳ ವರಿವಿಗೂ ಇರುವ ಬಾಬತು ..	1ನೇ ಡಿಟೋ	0	8	0
ಡಿಟೋ ಡಿಟೋ	2ನೇ ಡಿಟೋ	0	6	0
ಡಿಟೋ 4 ಸಲೆ ಅಡಿ ಲಾಗಾಯತು 8 ಅಡಿಗಳ ವರಿವಿಗೂ ..	1ನೇ ಡಿಟೋ	0	10	0
ಡಿಟೋ ಡಿಟೋ	2ನೇ ಡಿಟೋ	0	8	0
ಡಿಟೋ 8 ಸಲೆ ಅಡಿ ಲಾಗಾಯತು 12 ಸಲೆ ಅಡಿಗಳ ವರಿವಿಗೂ	1ನೇ ಡಿಟೋ	0	12	0
ಡಿಟೋ ಡಿಟೋ	2ನೇ ಡಿಟೋ	0	10	0
ಜಂಗ್ಲೀಮರದ ಕೂಚಗಳು 4 ಸಲೆ ಅಡಿಗಳ ವರಿವಿಗೂ ..	1ನೇ ಡಿಟೋ	0	4	0
ಡಿಟೋ ಡಿಟೋ	2ನೇ ಡಿಟೋ	0	2	0
ಡಿಟೋ 4 ಸಲೆ ಅಡಿಗಳ ಲಾಗಾಯತು 8 ಸಲೆ ಅಡಿಗಳ ವರಿವಿಗೆ	1ನೇ ಡಿಟೋ	0	6	0
ಡಿಟೋ ಡಿಟೋ	2ನೇ ಡಿಟೋ	0	4	0
ಡಿಟೋ 8 ಸಲೆ ಅಡಿಗಳ ಲಾಗಾಯತು 12 ಸಲೆ ಅಡಿಗಳ ವರಿವಿಗೆ	1ನೇ ಡಿಟೋ	0	8	0
ಡಿಟೋ ಡಿಟೋ	2ನೇ ಡಿಟೋ	0	6	0
ಹೆಬ್ಬಿದರು ಯಾ ದೊಡ್ಡ ಬೊಂಬಗಳು	100ಕ್ಕೆ	12	0	0
ಕಿರಿ ಬಿದರು ಯಾ ಸಂಣ ಬೊಂಬುಗಳು	ಡಿಟೋ	5	0	0
ಸರಟಿ (ಸಂಣ ಫಟ್ಟಿ ಬಿದರು)	ಡಿಟೋ	1	8	0

ತಾರೀಖು 15ನೇ ಮಾರ್ಚಿ 1890.

ನಂ. 367.—1890ನೇ ಇಸವಿ ಮಾರ್ಚಿ 1ನೇ ಮಕ್ಕಂ ಗವರ್ನಮೆಂಟ್ 977—8ನೇ ನಂಬರ್ ಹುಕುಮಿನಲ್ಲಿ ಕಂಡ ಈ ಕೆಳಗೆ ನಮೂದು ಮಾಡಲ್ಪಟ್ಟ ನಿಬಂಧನೆಗಳು ಮೈಸೂರು ಕೋರ್ಟೆಯಲ್ಲಿ ಖಂಡಿತವಾಗಿ ಜಾರೀಲಿ ಇರತಕ್ಕ ಬಗ್ಗೆ ವಿಧಾಯಕ ಮಾಡಲ್ಪಟ್ಟಿವೆ:—

1. ಸರಕಾರ ಅಥವಾ ಮುನಿಸಿಪಲಿಗೆ ಕೀರಿದ ಯಾ ಮುಂದೆ ಕೀರಲ್ಪಡುವ ಜಮಿನುಗಳ ಮೇಲೆ ಹೊಸ ಕಟ್ಟಡಗಳಿಗೆ ಅವಕಾಶ ಕೊಡಕೂಡದ್ದು.

2. ಪ್ರತಿ ಒಂದು ಹಳೇ ಕಟ್ಟಡಗಳನ್ನು ಬಿಚ್ಚಿ ಕಟ್ಟಲ್ಪಡುವ ಸಮಯದಲ್ಲಿ ವಿಶೇಷವಾಗಿ ಘಾಳಿ ಸಂಚಾರಕ್ಕೂ, ಚರಂಡೀ ನೀರು ಸಲೀಸ್ ಹರಿಯುವದಕ್ಕೂ, ಸಾರ್ವಜ ಅಥವಾ ಕಚಡಾ ಗಾಡಿ ಮುಂತಾದ್ದು ತಿರುಗಾಡುವದಕ್ಕೂ, ಅನುಕೂಲಿಸುವ ಹಾಗೆ ರಸ್ತೆಗಳ ಏರ್ಪಾಟುಗಳು ಮಾಡುವದಕ್ಕೂ, ಕೈ ಬಿಡಕೂಡದು.

3. ಸರಕಾರಿ ಅಲ್ಲದ ಖಾಲಿ ಜಮಿನುಗಳು.

(a) ಪ್ರತ್ಯೇಕವಾಗಿ ವಿಂಗಡವಾದ ಪ್ರದೇಶದಲ್ಲಿದ್ದರೂ ಅಥವಾ ಕಟ್ಟಡಗಳನ್ನು ಕಟ್ಟುವದಕ್ಕೆ ತಕ್ಕದ್ದಾಗಿಲ್ಲದಿದ್ದರೂ ಅಂಥಾವುಗಳ ಮೇಲೆ ಕಟ್ಟಡಗಳನ್ನ ಕಟ್ಟಕೂಡದು, ಅಥವಾ,

(b) ಖಾಲಿಯಾಗಿರುವದಕ್ಕಿಂತ ಕಟ್ಟಡ ಕಟ್ಟುವದೇ ಚಂದವಾಗಿರುವ ಪಕ್ಷದಲ್ಲಿ ಸದರೀ ಖಾಲಿಜಮಿನಿನ ಸ್ವಂತಗಾರನು ನಿಯಮಿಸಲ್ಪಟ್ಟ ಕಾಲದೊಳಗಾಗಿ ಕಟ್ಟಡವನ್ನು ಕಟ್ಟುವಂತೆ ಅಪೇಕ್ಷಿಸಲ್ಪಡತಕ್ಕದ್ದು. ಅದಕ್ಕೆ ತಪ್ಪುವ ಪಕ್ಷದಲ್ಲಿ ಮನೆಗಳನ್ನು ಕಟ್ಟುವ ಬಗ್ಗಾಗಿ ಸದರೀ ಜಮಿನುಗಳು ಕಾನೂನಿನ ಪ್ರಕಾರ ವ್ಯವಸ್ಥೆ ಮಾಡಲ್ಪಡತಕ್ಕದ್ದು.

4. ವಿಸ್ತೃತ ಖಾಲೀ ಜಾಗಾಗಳು, ಅವುಗಳ ಮೇಲೆ ಕಟ್ಟಡಗಳನ್ನು ಕಟ್ಟುವ ವರಿಗೂ ಕಚೇರಿ ಯಿಲ್ಲದಂತೆಯೂ ಆಸ್ಪತ್ಯಕರವಾದ ಗಿಡಗಿಟ್ಟಿಗಳು ಬೆಳೆಯದಂತೆಯೂ ಉಸ್ತುವಾರಿಯಲ್ಲಿಡತಕ್ಕದ್ದು.

5. ಯಲ್ಲಾ ಹೊಸಕಟ್ಟಡಗಳ ವಿಷಯದಲ್ಲಿಯೂ ಕಾಮಗಾರಿಗೆ ಮುತುವಾಗುವದಕ್ಕೆ ಮುಂಚಿತವಾಗಿಯೇ ಉದ್ದೇಸಿಸಲ್ಪಟ್ಟವುಗಳ ಮುಂಭಾಗವು ಬಚ್ಚಲು ನೀರು ಹೋಗುವ ಮತ್ತು ಈಚರಾ ನಿವರ್ತಿಯಾಗುವ ಏರ್ಪಾಟುಗಳು ಕ್ರಮವಾದ ನಕ್ಷೆಯೇ ಲೆ ಬರಹಮೂಲಕವಾಗಿ ಸ್ಯಾನಿಟೆರಿ ಇಂಜನೀರ್ರವರಿಂದ ಮಂಜೂರ್ ಮಾಡಲ್ಪಡತಕ್ಕದ್ದು. ಮನೆ ಕಟ್ಟುವದಕ್ಕೆ ಮಾಡುವ ದರಖಾಸ್ತುಗಳನ್ನು ಬಂದು ತಿಂಗಳಿಗೆ ಮಿಗದ ಕಾಲದಲ್ಲಿ ಅಂಗೀಕಾರವಾಗಲಿ ಅಥವಾ ತಿರಸ್ಕಾರವಾಗಲಿ ಮಾಡತಕ್ಕದ್ದು.

6. ಸ್ಯಾನಿಟೆರಿ ಇಂಜನೀರ್ರವರು ಪದೆ ಪದೆ ಸಾಧ್ಯವಾದ ಮಟ್ಟಿಗೂ ಕನಿಷ್ಟಪಕ್ಷ ಯರಡು ವಾರಕ್ಕೊಂದಾವರ್ತಿ ಯಾದರೂ ಕೋಟೆಯನ್ನು ನೋಡತಕ್ಕದ್ದು, ಮತ್ತು ತನಿಖೆಯಲ್ಲಿ ಕಂಡುಬಂದ ಫಲಿತಾಂಶವನ್ನು ಗವರ್ಮೆಂಟಿನವರಿಗೂ ಮ್ಯುನಿಸಿಪಲ್ ಪ್ರೆಸಿಡೆಂಟರವರಿಗೂ, ಹದಿನೈದು ದಿವಸಕ್ಕೊಂದಾವರ್ತಿ ಕಳುಹಿಸಿಕೊಡಬೇಕು, ಸದರೀ ರಿಪೋರ್ಟು ಮೇಲೆಕಂಡ ನಿಬಂಧನೆಗಳು ಜಾರೀಯಲ್ಲಿ ಯಿರುತ್ತಿರುವದನ್ನು ಸಾಮಾನ್ಯವಾಗಿ ಆರೋಗ್ಯಸ್ಥಿತಿಯನ್ನು ಮತ್ತು ಅವಶ್ಯಕವಾದ ಕಾರ್ಯಗಳನ್ನು ಸಹ ತೋರಿಸುತ್ತಿರಬೇಕು.

7. ಗವರ್ಮೆಂಟಿನವರ ಸ್ಪಷ್ಟವಾದ ಪೂರ್ವಜ್ಞಾತಿ ಯಿಲ್ಲದೆ ಈ ನಿಬಂಧನೆಗಳಿಗೆ ಯಾವ ವಿಧವಾದ ವಿನಾಯಿತಿಯೂ ಮಾಡಲ್ಪಡಕೂಡದು.

ತಾರೀಖು 10ನೇ ಮಾರ್ಚಿ 1890.

ನಂ. 393.—ಕೋಟೆಗಳ ಯಾ ಕೆರೆಗಳ ಕಲ್ಲುಗಳನ್ನ ಉಪಯೋಗಿಸಿಕೊಳ್ಳುವ ವಿಷಯದಲ್ಲಿ ಸ್ಯ 1890ನೇ ಇಸವಿ ಮಾರ್ಚಿ 8ನೇ ಮಕ್ಕುಮಿನ 9761—2—169ನೇ ನಂಬರುಳ್ಳ ಗವರ್ಮೆಂಟ್ ಆರ್ಡರಿನಲ್ಲಿ ವಿಧಿನೋಟಾದ ಇದರಡಿ. ಬರುವ ನಿಬಂಧನೆಗಳನ್ನು ಸಮಸ್ತ ಜನಗಳ ತಿಳುವಳಿಕೆ ಬಗ್ಯೋ ವ ಆಜರೆಣಿ ಬಗ್ಯೋ ಪ್ರಕಟಪಡಿಸೋಣಾಗಿರುತ್ತದೆ.

1. ಒಳ್ಳೇ ಸ್ಥಿತಿಯಲ್ಲಿರುವ ಯಾ ಶಿಕಸ್ತಾಗಿರುವ ಯಾವ ಕೋಟೆ ಯಾ ಕೆರೆಗಳ ಕಲ್ಲುಗಳನ್ನಾಗಲಿ ಯಾವ ಪಬ್ಲಿಕ್ (ಅಂದರೆ ಸರ್ಕಾರಿ ಮ್ಯುನಿಸಿಪಲ್ ವ ಸ್ಥಳಿಕ ಕಾಮಗಾರಿಗಳಿಗೋಸ್ಕರವಾಗಿಯಾಗಲಿ, ಯಾ ಇತರ ಉದ್ದೇಶಗಳಿಗಾಗಿಯಾಗಲಿ, ಬೇಕಾಗಿರುವ ಕಲ್ಲುಗಳ ಅಂದಾಜು ತೇದಾದು ವ ಅಂದಾಜು ಮೊಬಲಗ್ ತಪಶೀಲ್ ನಮೂದಿನಿಂದ ಬಂದು ತಬ್ಜೆನಿಸಿ ಡಿಪ್ಯೂಟಿ ಕಮ್ಮಿಷನರಿಗೆ ದರಖಾಸ್ತು ಮಾಡಿ ಅವರು ಅಪ್ಪಣೆ ಕೊಟ್ಟು ಹೊರ್ತು ಉಪಯೋಗಿಸಿಕೊಳ್ಳಕೂಡದು.

2. ಅಂಥಾ ಅಪ್ಪಣೆಯು ಕೋರಲ್ಪಟ್ಟಾಗ, ಕಲ್ಲುಗಳನ್ನ ಸಾಗಿಸಿ ಉಪಯೋಗಿಸಿಕೊಳ್ಳಲಿಕ್ಕೆ ಆಕ್ಷೇಪಣೆ ಯೇನಾದರು ಉಂಟೆ ಯಂತ ರೆವಿನ್ಯೂ ಇಲಾಖೆಯವರು ಕೂಡ್ಲೆ ವಿಚಾರಣೆ ಮಾಡಬೇಕು.

3. ಯಾವ ಆಕ್ಷೇಪಣೆಯೂ ಇಲ್ಲದೆ ಇದ್ದಲ್ಲಿ ದರಖಾಸ್ತಿನಂತೆ ಕಲ್ಲುಗಳನ್ನ ಸಾಗಿಸಿ ಉಪಯೋಗಿಸಿಕೊಳ್ಳುವಂತೆ ತಕ್ಷಣವೆ ಅವ ಕಾಶ ಕೊಡಲ್ಪಟ್ಟು ಕಲ್ಲುಗಳ ಖರೀದಿ ಕ್ರಮವಾಗಿ ಗವರ್ಮೆಂಟ್ ರೆವಿನ್ಯೂ ಇಲಾಖೆಗೆ ಜಮಾ ದಾಖಲಾಗತಕ್ಕದ್ದು.

4. ಕಲ್ಲುಗಳ ಖರೀದಿ ವಿಷಯದಲ್ಲಿ ಅವುಗಳಿಗಾಗಿ ದರಖಾಸ್ತು ಮಾಡುವ ಆಫಿಸರರಿಗೂ ಡಿಪ್ಯೂಟಿ ಕಮ್ಮಿಷನರವರಿಗೂ ಪರಸ್ಪರ ಭಿನ್ನಾಭಿಪ್ರಾಯ ಉಂಟಾದರೆ, ಅದೇ ಕಾರಣದಿಂದ ದರಖಾಸ್ತನ್ನ ಮಂಜೂರ್ಮಾಡಲಿಕ್ಕೆ ಸಾವಕಾಶವಾಗಕೂಡದು. ಯಿಂಥಾ ಸಂದರ್ಭಗಳಲ್ಲಿ ಅಪ್ಪಣೆ ಮೊದಲು ಕೊಡಲ್ಪಟ್ಟು, ಅನಂತರ ಖರೀದಿ ವಿಷಯವು ಗವರ್ಮೆಂಟಿನವರ ಹುಕುಮಿನ ಬಗ್ಯೆ ರಿಪೋರ್ಟು ಮಾಡಲ್ಪಡತಕ್ಕದ್ದು.

5. ಯಾವ ಕಾಮಗಾರಿಗೋಸ್ಕರ ಯಿಂಥಾ ಕಲ್ಲುಗಳು ಉಪಯೋಗಿಸಬೇಕಾಗಿರುತ್ತದೆಯೋ ಅಂಥಾ ಕಾಮಗಾರಿಗಳಿಗೆ ಸಂಬಂಧಪಟ್ಟ ದರೋಬಸ್ತು ಪಬ್ಲಿಕ್ವರ್ಕ್ಸ್ ಇಲಾಖೆಯ ಅಂದಾಜು ಪಟ್ಟಿಗಳಲ್ಲಿಯೂ ಡಿಟೋ ಕಲ್ಲುಗಳ ಖರೀದಿಯು ನಮೂದಿಸಲ್ಪಟ್ಟಿರತಕ್ಕದ್ದು, ಅಂಥಾ ಕಾಮಗಾರಿಗಾಗಿ ಕಂಟ್ರಾಕ್ಟು ಕೊಡುವಾಗ, ಕೋಟೆ ವ ಕೆರೆಗಳಲ್ಲಿರುವ ಗವರ್ಮೆಂಟಿನ ಕಲ್ಲುಗಳನ್ನು ಉಪಯೋಗಿಸಿಕೊಳ್ಳುವಂತೆ ಕಂಟ್ರಾಕ್ಟರಿಗೆ ಅಪ್ಪಣೆ ಕೊಡುವವರ ದೆಸೆಯಿಂದ ಕಂಟ್ರಾಕ್ಟರಿಗೆ ಜಾಸ್ತಿ ಖಾಯಿದೆ ಉಂಟಾಗದಂತೆ ನಿಗೇಯಲ್ಲಿ ಯಿರತಕ್ಕದ್ದು.

6. ಈ ಮೇಲ್ಕಂಡ ರೂಲ್ಸಗಳು, ಸ್ಯ 1875ನೇ ಇಸವಿ ಜುಲೈ 19ನೇ ಮಕ್ಕುಂ 3276—138ನೇ ನಂಬರುಳ್ಳ ಮತ್ತು ಸ್ಯ 1880ನೇ ಇಸವಿ ಜುಲೈ 27ನೇ ಮಕ್ಕುಮಿನ 2484—353ನೇ ನಂಬರುಳ್ಳ ಲೀಟ್ ಚೀಫ್ ಕಮ್ಮಿಷನರವರ ಪ್ರೊಸೀಡಿಂಗ್ಸಗಳಲ್ಲಿ ನಮೂದಿರುವ ನಿಬಂಧನೆಗಳಿಗೆ ಉಪನಿಬಂಧನೆಗಳಾಗಿ ತಿಳಿಯತಕ್ಕದ್ದು.

ರೂಲ್.

ಮೈಸೂರು ಗೆಜೆಟ್ಟಿಗೆ ಚಂದಾ ಹಣವನ್ನು ಪಾವತಿಮಾಡತಕ್ಕ ವಿಷಯದಲ್ಲಿ ಹಾಲಿ ಜಾರಿಯಿರುವ ನಡೆವಳಿತವೆನ್ನ ರದ್ದು ಮಾಡಿ ಇದರಡಿ ಬರುವ ನಿಬಂಧನೆಯನ್ನು ವಿಧಿನೋಟಾಗಿರುತ್ತೆ.

ಯಿಳ್ಳೆಪುಳ್ಳ ಚಂದದಾರರು, ಅವರ ಚಂದಾ ಮೊಬಲಗನ್ನು ಅತ್ಯಂತ ಸಮೀಪವಾದ ತಾಲ್ಲೂಕು ಖಜಾನೆಗೆ ಪಾವತಿ ಮಾಡಬೇಕು.

ಅಮಲ್ದಾರರು ಹಾಂಗೆ ಪಾವತಿ ಮಾಡೋಣಾದ ಮೊಬಲಗಿಗೆ, ಟ್ರೆಜರಿಗೆ ಬಂದ ಮೊಬಲಗ್ಗಾಗಿ ಕೊಡುವ ವಾಡಿಕೆಯಾದ ಅಚ್ಚಿನ ನಮೂನೆಯಲ್ಲಿ ದ್ವಿಪ್ರತಿ ರೀತಿಯನ್ನ ತಯಾರ್ಮಾಡಿಕೊಡತಕ್ಕದ್ದು.

ಚಂದಾದಾರನು ಡ್ಯುಪ್ಲಿಕೇಟ್ ರೀತಿಯನ್ನು ತನ್ನಲ್ಲಿ ಯಿಟ್ಟುಕೊಂಡು, ಒರಿಜೆನಲ್ ರೀತಿಯನ್ನು ತನ್ನ ದರಖಾಸ್ತಿನ ಸಂಗಡ ಮೈಸೂರು ಗೆಜೆಟ್ ಕಂಪೈಲರವರಿಗೆ ಕಳುಹಿಸತಕ್ಕದ್ದು.

ಕಂಪೈಲರವರು ಟ್ರೆಜರಿ ರೀತಿಯನ್ನು ಹಣಬಂದಂತೆ ಕಳುಹಿಸಿಕೊಳ್ಳುವರು.

ತಾರೀಖು 20ನೇ ಮಾರ್ಚಿ 1890.

ಕ್ಯಾಂಪ್ ನಂ. 1047.—ಮೈಸೂರು ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕ್ಷಸರ್‌ವೇಟರ್ ವೆಂ|| ಶಿ. ನಾರಾಯಣ ರಾಯರಿಗೆ, ಆವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಯರಡು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ವೆಂ|| ನಾರಾಯಣರಾಯರು ರಜಾದ ಮೇಲೆ ಯಿರುವ ಪರ್ಯಂತ ಯಾ ಮತ್ತೊಂದು ಹುಕುಂ ಕೊಡುವ ವರಿವಿಗೂ ಸಬ್ ಅಸಿಸ್ಟೆಂಟ್ ಕ್ಷಸರ್‌ವೇಟರ್ ವೆಂ|| ಬಿ. ರಾಮಸ್ವಾಮಯ್ಯರ್ ಯವರು ಮೈಸೂರ ಅಸಿಸ್ಟೆಂಟ್ ಕ್ಷಸರ್‌ವೇಟರ್ ಕೆಲಸವನ್ನ ಆಕ್ಟಿಂಗ್ ತರೀಕ್ ನೋಡುವಂತೆ ವೊಕರರ್ ಮಾಡಲ್ಪಟ್ಟಿರುತ್ತಾರೆ.

ತಾರೀಖು 14ನೇ ಮಾರ್ಚಿ 1890.

ನಂ. 369.—ತರೀ ಜಮ್ರ್ಮಾಗಳಿಗೆ ನೀರು ಸಾಳದೇ ಹೋದದ್ದರಿಂದ ಜಮ್ರ್ಮಾ ಬಂಜರ್ ಬಿದ್ದದ್ದಕ್ಕಾಗಿ ಕಂದಾಯ ಮಾಫಿ ಮಾಡತಕ್ಕ ಬಗ್ಯೆ, ಸ್ರ 1886ನೇ ಇಸವಿ ಜೂನ್ 5ನೇ ಮತ್ತು ಂ 90ನೇ ನಂಬರ್ ಇಸ್ತಿಹಾರಿನಲ್ಲಿ ಫಾಯಿಷ್ ಮಾಡೋಣಾದ ನಿಬಂಧನೆಗಳನ್ನ ರದ್ದುಪಡಿಸಿ, ಇದರಡಿ ಬರುವ ಪರಿಷ್ಕರಿಸಲ್ಪಟ್ಟ ನಿಬಂಧನೆಗಳನ್ನ ಇದಕ್ಕೆ ಸಂಬಂಧಪಟ್ಟವ್ರ ದರೋಬಸ್ತು ಜನಗಳ ತಿಳುವಳಿಕೆ ಬಗ್ಯೆ ಪ್ರಕಟ ಪಡಿಸೋಣಾಗಿರುತ್ತದೆ:—

1. ಕೆರೆ ಯಾ ಇತರ ಯಾವ ಜಲಾಧಾರವು ಒಡದು ಹೋಗುವಣದರಿಂದಲಾಗಲಿ ಮತ್ತ್ಯಾವ ಆಕಸ್ಮಿಕ ಸಂಭವಿಸುವಣದರಿಂದಲಾಗಲಿ, ಅವು ನೀರಾವರಿ ಸಾಗುವಳಿ ಕೆಲಸಕ್ಕೆ ಅನುಪಯುಕ್ತವಾದಲ್ಲಿ ಅಂಥಾ ಕೆರೆ ಯಾ ಜಲಾಧಾರ ಒಡದು ಹೋದ ಯಾ ಆದಕ್ಕೆ ಆ ಆಕಸ್ಮಿಕ ಸಂಭವಿಸಿದ ಮೊದಲನೇ ವರುಷದಲ್ಲಿಯೂ, ಮತ್ತು ಆ ತರುವಾಯ ಅವು ಶಿಕಸ್ತಿನಲ್ಲಿಯೇ ಯಿದ್ದು ನೀರಾವರಿ ಸಾಗುವಳಿಗೆ ಅನುಪಯುಕ್ತವಾಗಿ ಯಷ್ಟು ವರುಷಗಳ ಪರ್ಯಂತ ಯಿರುತ್ತೆನ್ನೋ ಅದುವರಿವಿಗೂ ಹಂಗಾಮಿ ತರೀಕ್ ಪೂರಾ ತರೀ ಕಂದಾಯದ ಅರ್ಧ ಮೊಬಲಗನ್ನ ಬೆಂಗಾರ ಕಂದಾಯದಂತೆ ವಸೂಲ್ ಮಾಡತಕ್ಕದ್ದು. ಯಾವ ಖುಷ್ಕಿ ಫಸಲು ಯಿಟ್ಟುಕೊಂಡಾಗ್ಯೂ ಸರಿಯೇ ಬಾಕಿ ಅರ್ಧ ಕಂದಾಯವನ್ನ ಲೆಖ್ಕದಲ್ಲಿ ರಿಮಿಷ್ಟ ಯಾನೆ ಮುಜರೆ ಡಾಖಲ್ಮಾಡತಕ್ಕದ್ದು.

2. ಮಾಮೂಲ್ ಮೇರಿನ ನೀರನ್ನ ಉಪಯೋಗಿಸಿ ಕೊಂಡಿರಲಿ ಅಥವಾ ಉಪಯೋಗಿಸಿಕೊಂಡಿರ ಬಹುದಾಗಿರಲಿ, ಆ ತರುವಾಯು ಅದೇ ವರುಷದೊಳಗೆ ಒಡದು ಹೋದರೆ ಯಾ ಇತರ ಆಕಸ್ಮಿಕ ಸಂಭವಿಸಿದರೆ, ಹಿಂದಿನ ಕಲಮಿನಲ್ಲಿ ಉದಹರಿಸೋಣಾದಂತೆ ಅನುಸರಿಸದೆ ಆ ಸಾಲಿನ ಪೂರಾ ಕಂದಾಯ ವಸೂಲ್ ಮಾಡತಕ್ಕದ್ದು.

3. ಕೆರೆ ಯಾ ಇತರ ಜಲಾಧಾರ ಒಡದು ಹೋಗುವಣ ಯಾ ಆವ್ರುಗಳಿಗೆ ಆಕಸ್ಮಿಕ ಸಂಭವಿಸಿದಾಗ್ಯೂ ಯಾವ ಜಮ್ರ್ಮಾಗಳು, ಅವು ಯಿರುವಂಥಾ ಪ್ರದೇಶದ ದೆಸೆಯಿಂದಲೇ ತರೀ ಫಸಲ್ ಯಿಡಲಿಕ್ಕೆ ಲಾಯಖಾಗಿರುತ್ತವೊ ಅಂಥಾ ಜಮ್ರ್ಮಾಗಳು ಬಂದನೇ ಕಲಂನಲ್ಲಿ ಕಾಣಿಸಿರುವ ಕಂದಾಯ ಕಮ್ಮಿ ಯಾ ರಿಮಿಷ್ಟ ಹೊಂದಲಿಕ್ಕೆ ಅರ್ಹವಾಗಿರುವದಿಲ್ಲವು.

4. ಯಾವ ಸಾಲಿನಲ್ಲಿ ಒಡದು ಹೋಗೋಣ ಯಾ ಇತರ ಆಕಸ್ಮಿಕ ಸಂಭವಿಸುತ್ತೊ ಆ ವರುಷ ಡಿಪ್ಯೂಟಿ ಕಮ್ಮಿಷನರಾಗಲಿ ಯಾ ಅವರ ಅಸಿಸ್ಟೆಂಟರುಗಳ ವೈಕಿ ಯಾರಾದರು ನ್ವೊಬ್ಬರು ಸಾಗುವಳಿ ಕಾಲದಲ್ಲಿ ಖುದ್ದು ನೋಡಿ ತನಖಿ ಮಾಡಿದ ತರುವಾಯು 1ನೇ ಕಲಮನ್ನ ಸರಿಸಿ ಹಂಗಾಮಿ ತರೀಕ್ ಕಂದಾಯ ಕಮ್ಮಿ ಹಾಕೋಣವು ಫಲಾನೇ ಜಮೀನುಗಳು ಅರ್ಹವಾದ್ದಾಗಿರುತ್ತವೆ ಯಂದು ವೊಂದೇ ದಫಾ ತೀರ್ಮಾನಿಸತಕ್ಕದ್ದು.

5. ಸರ್ಕಾರದವರಿಂದ ಅಂಥಾ ಜಲಾಧಾರದ ಕೆಲಸಗಳು ಪುನಶ್ಚ ಸರಿಯಾದ ಸ್ಥಿತಿಗೆ ಬರುವ ವರಿವಿಗೂ, ಸದರೀ ಹಂಗಾಮಿ ತರೀಕ್ ಕಂದಾಯ ಕಮ್ಮಿ ಹಾಕೋಣವು ಪ್ರತಿ ಜವಾಬಂದಿ ತರಾವಿನಲ್ಲೂ ನಡಿಯತಕ್ಕದ್ದು, ಜವೂಬಂದಿ ಹೈದಾದ ಕೂಡ್ಲೆ ಇದಕ್ಕೆ ಲಗತ್ತು ಇರುವ ನಮೂನೆ ಮೇರಿಗೆ ಬಂದು ತಖ್ತೆಯನ್ನ ದಿವಾಣರವರ ಬೀಳ್ಗೆ ಸೆಕ್ರೆಟೆರಿಯವರಿಗೆ ಕಳುಹಿಸತಕ್ಕದ್ದು.

6. ಈ ಮೇಲಹೇಳೋಣಾದ ನಿಬಂಧನೆಗಳನ್ನನುಸರಿಸಿ ಯಿರದೇ ಯಿರುವ ಸಂಗತಿಗಳಲ್ಲಿ, ಗವರ್ನಮೆಂಟ್‌ನವರಿಂದ ಮುಂಚಿತವಾಗಿ ಮುಂಜೂರಾತಿ ಪಡೆಯದೇ ರಿಮಿಷ್ಟ ಯಾನೆ ಮುಜರೆಯನ್ನ ಕೊಡಲೇ ಕೂಡದು.

7. ಹಾಲೀಜಾರೀಲಿರುವ ತರೀ ಕಂದಾಯದ ದರಗಳನ್ನ, ನೀರಾವರಿ ಆಧಾರದ ಮೌಲ್ಯದ ಮೇಲೂ, ಸುಭಿಕ್ಷ ದುರ್ಭಿಕ್ಷ ಕಾಲಗಳ ಸರಾಸರಿಯ ಪೂರಾ ಆಲೋಚನೇ ಮೇಲೂ ತೆರಾವ್ ಮಾಡೋಣಾಗಿರುತ್ತದೆ ಯಾಗಿ ಯಿಂಥಾ ದರಗಳು, ಜಮೀನು ಬಂಜರ್‌ನಲ್ಲಿ ಯಿಡಲ್ಪಟ್ಟಿದ್ದವೆಂಬ ಸಬಬಿನ ಮೇಲೆ ಕಮ್ಮಿಯಾಗತಕ್ಕದ್ದಲ್ಲವು.

8. ಅಪರೂಪಸಾಲ್‌ಗಳಲ್ಲಿ, ಮಳೆ ಕೇವಲ ಕಡಿಮೆಯಾಗಿ ಬಿದ್ದು ಆದರ ದೆಕೆಯಿಂದ ಬೆಳೆಗೆ ಲುಕ್ಸಾನ್ ಸಂಭವಿಸಿರುವ ನಿರ್ದಿಷ್ಟ ಪ್ರದೇಶಗಳಿಗಾಗಿ ಜಮ್ರ್ಮಾ ಕಂದಾಯವನ್ನ ವಿಶೇಷವಾದ ರಿಮಿಷ್ಟ ಯಾನೆ ಮುಜರೆ ಕೊಡಲು ಹುಕ್ಕುಂ ಕೊಡುವ ಕೆಲಸವು ಗವರ್ನಮೆಂಟಿನವರದಾಗಿರುತ್ತೆ.

ಸ್ನ 1890ನೇ ಇಸವಿ ಮಾರ್ಚಿ 5ನೇ ಮುಕ್ತಂ 9792—800—214ನೇ ನಂಬರ್ಳ್ಳದರ್ಪ್ಪಣರವರ ಪ್ರೊಸೀಡಿಂಗ್ಸ್ ಅನುಸರಿಸಿ ಹಂಗಾಮಿ ತರೀಕು ಕೊಡೋಣಾದ ರಿಮಿರ್ಷ್ ತಖ್ತಾ.

1	2	3	4	5	6	7	8	9	10
ಕಾಲ್ಮ.	ನಾಮ.	ಯಜಮಾನರ ಜಾಫೀದಾರರ ಹೆಸರು.	ಒಪ್ಪದ ಹೋದ ಯಾ ಇತರ ಆಳಿನ ಸಂಪಾದನೆಯ ಪಾಲು.	ಜಂಡರ್ ನಂಬರು.	ಖಾತೇದಾರನ ಹೆಸರು.	ಖಾತೆಯಲ್ಲಿ ಒಪ್ಪಿದ ಮೇರಿಗೆ ತರೀ ನಮೂದಾಗುವ ಯಕ್ಕುಲ್ಲು ಬೀಜವರಿ.	7ನೇ ಮೇಸ್ತಕಿ ನಲ್ಲಿ ನಮೂದಾಗಿರುವ ಹಿಡುವಳಿಯ ಮೇಲೆ ಪೊಟ್ಟು ತರೀ ಕಂದಾಯ.	ಹುಕುಮಿನ 8ನೇ ಕಲಮಿನು ಸರಿಸಿ ಹಂಗಾಮಿ ತರೀಕುರಿಮಿರ್ಷ್ ಮಾಡೋಣಾದ ಅರ್ಧ ಮೊಬಲಗು.	ಪರಾ (ಪ್ರ)ತಿ ಕೆರೆಯ ವಿಷಯದಲ್ಲೂ ಖತಾಯತಿಗಳು ಪೂರೈಸಿದ ತರುವಾಯ ಅಂಥಾ ಪ್ರತಿ ಕೆರೆಯ ಕೆಳಗೆ ಹಿಡುವಳಿಯಲ್ಲಿ ಯಿರುವ ಕುಲ್ಲು ತರಿ ಬೀಜವರಿಯನ್ನೂ ಮತ್ತು ಹುಕುಮಿನ 4ನೇ ಕಲಮಿಗೆ ವೊಳಪಡುವ ಸಬಬು ರಿಮಿರ್ಷ್ ಕೊಡದೇ ತಳ್ಳುಪಡೀ ಮಾಡೋಣಾದ ಬೀಜವರಿಯನ್ನು ಸಹ ಈ ಮೆನ್ತಕಿನಲ್ಲಿ ದಾಖಲ್ಮಾಡತಕ್ಕದ್ದು.)

ತಾರೀಖು 22ನೇ ಮಾರ್ಚಿ 1890.

ನಂ. 371.—ಅಸಿಸ್ಟೆಂಟ್ ಕಮ್ಮಿಷನರ್ ಮೆ|| ಡಿ. ನಾಮಕಲ್ ರಾಯರು, ಮೈಸೂರು ಡಿಸ್ಟ್ರಿಕ್ಟ್ 2ನೇ ಜನರಲ್ ಅಸಿಸ್ಟೆಂಟ್ ಕಮ್ಮಿಷನರ್ ಆಫಿಸಿನ ಚಾರ್ಜನ್ನ 1890ನೇ ಇಸವಿ ಫಿಬ್ರವರಿ 27ನೇ ತಾರೀಖಿನ ಪೂರ್ವಾನ್ನದಲ್ಲಿ ವಹಿಸಿರುತ್ತಾರೆ.

ತಾರೀಖು 23ನೇ ಮಾರ್ಚಿ 1890.

ಕ್ಯಾಂಪ್ ನಂ. 1130.—ಇದರಿಂದ ತಿಳಿಯಪಡಿಸುವದೇನಂದರೆ, ೫ವಪೊಗ್ಗಾ ಡಿಸ್ಟ್ರಿಕ್ಟಿನೊಳಗೆ ಮೇದರುಗಳು ಸಾಗಿಸುವಂತಾ (ಕೆಳದೆ ಇರುವ) ಕಿರಿಬಿದರುಗಳಿಗಾಗಿ ಕೊಡಲ್ಪಡುವ ಪೈರ್ಮಿಸಿಗಳ ಬಗ್ಗೆ ಇದರಿಂದ ನಮೂದಾಗುವ ದರಗಳು ವಸೂಲ್ ಮಾಡಲ್ಪಡುವವು.

ಮೈದಾನ ತಾಲ್ಲೂಕುಗಳಲ್ಲಿ 100 ಬಿದರುಗಳಿಗೆ 2 ರೂಪಾಯಿ
ಮಲ್ನಾಡ್ ತಾಲ್ಲೂಕುಗಳಲ್ಲಿ ಡಿಟೋ ಡಿಟೋ 1—8—0 ರೂ.

ಕ್ಯಾಂಪ್ ನಂ. 1148.—ತುಮಕೂರು ಡಿ|| ಡೆಪ್ಯೂಟಿ ಕಮ್ಮಿಷನರ್ ಮೆ|| ಸಿ. ಕ್ರೈಸ್ ಯವರಿಗೆ, 1890ನೇ ಇಸವಿ ಏಪ್ರೆಲ್ 13ರ ಲಾಗಾಯತು ಯಾ ಆತರುವಾಯ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಒಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 26ನೇ ಮಾರ್ಚಿ 1890.

ಕ್ಯಾಂಪ್ ನಂ. 1190.—ಮೆ|| ಕ್ರೈಸ್ ಯವರು, ರಜಾದ ಮೇಲೆ ಇರುವ ಪರ್ಯಂತ ಯಾ ಮತ್ತೊಂದು ಹುಕುಂ ಕೊಡುವ ವರ್ಗಿಗೂ ಅಸಿಸ್ಟೆಂಟ್ ಕಮ್ಮಿಷನರ್ ಮೆ|| ಬಿ. ತಿರುಮಲಾಚಾರ್ ಬಿ. ಯಲ್. ಯವರು, ತುಮಕೂರು ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮ್ಮಿಷನರ್ ವ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟ್ ಕೆಲಸವನ್ನ ಆಕ್ಟಿಂಗ್ ತರೀಕ್ ನೋಡುವಂತೆ ವೊಕರರಿ ಮಾಡಲ್ಪಟ್ಟಿರುತ್ತಾರೆ.

ಆಕ್ಟಿಂಗ್ ಅಸಿಸ್ಟೆಂಟ್ ಕಮ್ಮಿಷನರ್ ಮೆ|| ನಾರಣಯ್ಯಂಗಾರ್ರು, ಚಿತ್ರದುರ್ಗದಿಂದ ಕಡೂರು ಡಿಸ್ಟ್ರಿಕ್ಟ್ ಟ್ರೆಜರಿ ಚಾರ್ಜಿಗೆ ವರ್ಗ ಮಾಡಲ್ಪಟ್ಟಿರುತ್ತಾರೆ. ಇವರು ಮೆ|| ಯರ್. ವೆಂಕಟರಾಯರಿಗೆ ಚಾರ್ಜ್ ವೊಪ್ಪಿಸಿದ ತರುವಾಯ ಕೆಲಸದ ಮೇಲೆ ಹೋಗತಕ್ಕದ್ದು.

ರಾಯಲಪಾಡೂರ್ ಮೆ|| ಎ. ಶ್ರೀನಿವಾಸಚಾರ್ಲು ಯವರು ದಿವಾನರವರ ಅಂಡರ್ ಸೆಕರೆಟರಿಯಾಗಿ ವೊಕರರ್ ಮಾಡಲ್ಪಟ್ಟಿರುತ್ತಾರೆ.

(ಅಫಿಷಿಯೇಟಿಂಗ್ ಅಂಡರ್ ಸೆಕ್ರೆಟರಿಯಾದ ಅ|| ಕಮ್ಮಿಷನರ್ ಮೆ|| ಯರ್. ಕೃಷ್ಣರಾವ್ ಯಂ. ಎ. ಬಿ. ಯಲ್. ಯವರು, ಬೆಂಗಳೂರು ಟರ್ಫ್ ಮೇಜಸ್ಟ್ರೇಟ್ ಕೆಲಸಕ್ಕೆ ವರ್ಗಮಾಡಲ್ಪಟ್ಟಿರುತ್ತಾರೆ.

ಬೆಂಗಳೂರು ಟರ್ಫ್ ಮೇಜಸ್ಟ್ರೇಟ್‌ಕೆಲಸ ನೋಡುತ್ತಿರುವ ಅ|| ಕಮ್ಮಿಷನರ್ ಮೆ|| ಬಿ. ರಘುನಾಥರಾವ್ ಯವರು, ಬೆಂಗಳೂರು ಡಿಸ್ಟ್ರಿಕ್ಟಿನ ಜನರಲ್‌ಡ್ಯೂಟಿಗಾಗಿ ವಾಪಸು ಹೋಗತಕ್ಕದ್ದು.

ಕ್ಯಾಂಪ್ ನಂ. 1192.—ಇದರಿಂದ ನಮೂದಾಗುವ ಅಸಿಸ್ಟೆಂಟ್ ಕಮ್ಮಿಷನರ್‌ಗಳ ಬಡ್ತಿಗಳನ್ನ ಮಂಜೂರ್ಮಾಡೋಣಾಗಿರುತ್ತದೆ.

ಮೆ|| ಯರ್. ಚಲುವೈಯ್ಯಂಗಾರ್ ಮೆ|| ಕೆ. ಮಹಮ್ಮದ್ ಅಲ್ಲಿ	1890ನೇ ಇಸವಿ ಏಪ್ರೆಲ್ 13ನೇ ತಾರೀಖು ಲಾಗಾಯಿತು 2ನೇ ಕ್ಲಾಸಿನಿಂದ 1ನೇ ಕ್ಲಾಸಿಗೆ ಬಡ್ತಿ
ಮೆ|| ಡಿ. ಆಪ್ಪಾರಾವ್ (ಬೇರೆಕೆಲಸದ ಮೇಲೆ) ಮೆ|| ಯರ್. ಕೃಷ್ಣರಾವ್ ಯಂ. ಎ. ಬೀ. ಯಲ್.	ಸ್ ೧೮೯೦ನೇ ಇಸವಿ ಏಪ್ರೆಲ್ ತಾರೀಖು 13ರ ಲಾಗಾಯತು 3ನೇ ಕ್ಲಾಸಿನಿಂದ 2ನೇ ಕ್ಲಾಸಿಗೆ ಬಡ್ತಿ
ಮೆ|| ಹೆಚ್. ರಾವಜಾನುಜಯ್ಯಂಗಾರ್ ಮೆ|| ಪಿ. ಆರ್. ಹೆಚ್. ವೆದರಾಲ್	ಸ್ ೧೮೯೦ನೇ ಇಸವಿ ಜನವರಿ ಗುರ್ರೆ ಲಾಗಾಯತು ಸಬ್ ಪ್ರೊಟೆಮ್ ತರೀಕು 4ನೇ ಕ್ಲಾಸಿನಲ್ಲಿ ಆಕ್ಟಿಂಗ್ ಅಸಿಸ್ಟೆಂಟ್ ಕಮ್ಮಿಷನರಾಗಿರತಕ್ಕದ್ದು.

ಸುಕುಂ ಬಮೋಜೇಬ್,
ಟಿ. ಆನಂದರಾವ್,
ಚೀಫ್ ಸೆಕ್ರೆಟರಿ.